ದಿನಾಂಕ:23-06-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಅನುಮತಿಯ ಮೇರೆಗೆ :-**

ಆ ದಿನ ಅಮಾನತು ಪಡಿಸಿದ ಮೊಬೈಲ್ ಗಳನನ್ನು ಈಗ ನೋಡಿದರೆ ಗುರುತಿಸಬಲ್ಲೆ. ಅವು ಈಗಾಗಲೇ ಮುಮಾ-22 ಮತ್ತು 23 ಎಂದು ಗುರುತಿಸಲಾಗಿದೆ.

**ಪಾಟೀಸವಾಲು ಶ್ರೀ.ಟಿ.ಎಸ್.ಎ ರವರಿಂದ ಎಲ್ಲಾ ಆರೋಪಿಗಳ ಪರವಾಗಿ:-**

ಆ ದಿನ ನಾನು 10 ಗಂಟೆಗೆ ನಮ್ಮ ಕಛೇರಿಗೆ ಹೋಗಿದ್ದೇನೆ. ನಾನು ಕಛೇರಿಗೆ ಹೋದ ಅರ್ಧ ಗಂಟೆಯ ನಂತರ ತಹಶಿಲ್ದಾರ್ ರವರು ನನ್ನನ್ನು ಕರೆಸಿದರು. ನಾನು ಮತ್ತು ನಕುಲ್ ಒಟ್ಟಿಗೆ ತಹಶಿಲ್ದಾರ್ ಬಳಿ ಹೊದೇವು. ತಹಶಿಲ್ದಾರರು ಇಬ್ಬರನ್ನು ಕೂಡ ಒಟ್ಟಿಗೆ ಬರಲು ಹೇಳಿದರು. ನನಗೆ ಸಾಕ್ಷಿಯಾಗಿ ಸಹಕರಿಸಲು ತಹಶಿಲ್ದಾರರು ರಿಲೀವಿಂಗ್ ಆದೇಶ ನೀಡಿಲ್ಲ. ತಹಶಿಲ್ದಾರ್ ನನಗೆ ಮೌಖಿಕ ಆದೇಶದ ಮೂಲಕ ಸಾಕ್ಷಿಯಾಗಲು ಹೇಳಿದ್ದಾರೆ. ಸಿ.ಪಿ.ಐ ಕಛೇರಿಯಲ್ಲಿ ನಾನು ರಿಜಿಸ್ಟರ್ ಗೆ ಸಹಿ ಹಾಕಿಲ್ಲ. ನಾನು ಸಿ.ಪಿ.ಐ ಕಛೇರಿಯಲ್ಲಿ 12:30 ಯಿಂದ 01:30 ತನಕ ಇದ್ದೆ. ನಾನು ಸಿ.ಪಿ.ಐ ಕಛೇರಿಗೆ ಹೋದಾಗ ಪೊಲೀಸರು ಅಲ್ಲದೆ 6 ಜನ ಆರೋಪಿಗಳು ಇದ್ದರು. ಸಿ.ಪಿ.ಐ ಕಛೇರಿಯಲ್ಲಿ ಪೊಲೀಸರು ಎಷ್ಟು ಜನ ಇದ್ದರು ಎಂದು ನೆನಪಿಲ್ಲ ಆದರೆ ಆರೋಪಿಗಳು ನೆಲದಲ್ಲಿ ಕೂತಿದ್ದರು. ಸಿ.ಪಿ.ಐ ಕಛೇರಿಯಲ್ಲಿ ಸಿ.ಪಿ.ಐ ರವರ ಕಛೇರಿ ಅಲ್ಲದೆ ಸಿಬ್ಬಂದಿ ಕಛೇರಿಗಳು ಮತ್ತು ಠಾಣಾ ಬಂದಿಗಳ ಸೆಲ್ ಕೂಡ ಇದೆ. ಅಲ್ಲಿ ಪೊಲೀಸರು ಅಲ್ಲದೆ ಒಬ್ಬ ಟೈಪಿಸ್ಟ್ ಇದ್ದರು. ಕಛೆರಿಗೆ ಸಿಬ್ಬಂದಿಗಳು ಒಂದೇ ರೂಂ ನಲ್ಲಿ ಇದ್ದರು. ಅಲ್ಲಿ ನನ್ನನ್ನು ಸಿ.ಪಿ.ಐ ರವರು ಬಟ್ಟು ಬೇರೆಯವರು ವಿಚಾರಣೆ ಮಾಡಿಲ್ಲ. ನನಗೆ ಕೇಸಿನ ನಂಬರ್ ಗಳು ಕಲಂ ಗಳು ಗೊತ್ತಾಗುವುದಿಲ್ಲ ಎಂದರೆ ಸರಿ. ನನಗೆ ಮಹಜರ್ ನಲ್ಲಿ ಏನು ಬರೆದಿದ್ದೆ ಎಂದು ಗೊತ್ತಿಲ್ಲ ಎಂದರೆ ಸರಿಯಲ್ಲ. ಆದರೆ

ಅದರಲ್ಲಿ ಬರೆದಿರುವ ಕಲಂ. ಗಳ ಬಗ್ಗೆ ಗೊತ್ತಿಲ್ಲ. ನಮ್ಮ ಕಛೇರಿಯ ಹಿಂಭಾಗದಲ್ಲಿ ಪಶ್ಚಿಮ ದಿಕ್ಕಿಗೆ ಸಿ.ಪಿ.ಐ ಕಛೇರಿ ಇದೆ. ಮಹಜರ್ ನಲ್ಲಿ ಚಕ್ಕು ಬಂದಿ ಬರೆದಿದ್ದಾರೋ ಇಲ್ಲವೊ ನನಗೆ ನೆನಪಿಲ್ಲ. ಮಹಜರ್ ನಲ್ಲಿ ಚಕ್ಕು ಬಂದಿ ಬರೆದದ್ದನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ. ಆದರೆ ನನಗೆ ಈಗ ನೆನಪಿಲ್ಲ. ಸಿ.ಪಿ.ಐ ಕಛೇರಿಯ ಪೂರ್ವ-ಪಶ್ಚಿಮ, ಉತ್ತರ-ದಕ್ಷಿಣ ಏನೇನು ಇದೆ ಎಂದು ಈಗ ನೆನಪಿಲ್ಲ. ಸಿ.ಪಿ.ಐ ಕಛೇರಿಯಲ್ಲಿ ಅವರ ಕೊಠಡಿ, ಸಿಬ್ಬಂದಿಗಳ ಕೊಠಡಿ ಮತ್ತು ಮುಖ್ಯ ದ್ವಾರ ಯಾವ ದಿಕ್ಕಿಗೆ ಇದೆ ಎಂದು ಈಗ ನೆನಪಿಲ್ಲ. ಸಿ.ಪಿ.ಐ ಕಛೇರಿಯಲ್ಲಿ ಸಿ.ಪಿ.ಐ ರವರ ಕೊಠಡಿ ಕಟ್ಟಡದ ಪಶ್ಚಿಮ ಭಾಗದಲ್ಲಿ ಇದೆ. ಸಿ.ಪಿ.ಐ ಕಛೇರಿಯ ಕಟ್ಟಡದ ಕಾಂಪೌಂಡ್ ಎಷ್ಟು ಉದ್ದ ಅಗಲ ಇದೆ ಎಂದು ಗೊತ್ತಿಲ್ಲ. ಆ ಕಾಂಪೌಂಡ್ ವಿಳಗೆ ಕಾಲೀಸ್ ಕಾಡಿ ನಿಲ್ಲಿಸುವಷ್ಟು ಜಾಗ ಇದೆ. ಕಾಂಪೌಂಡ್ ಒಳಗೆ ಖಾಲಿ ಜಾಗ ಎಷ್ಟು ಉದ್ದ-ಅಗಲ ಇದೆ ಎಂದು ಗೊತ್ತಿಲ್ಲ. ಕಾಂಪೌಂಡ್ ಒಳಗೆ ಅಮಾನತು ಪಡಿಸಿದ ದ್ವಿಚಕ್ರ ವಾಹನಗಳು ಇದ್ದವು ಆದರೆ ಎಷ್ಟು ಇದ್ದವು ಎಂದು ಗೊತ್ತಿಲ್ಲ. ಕಾಲೀಸ್ ಮತ್ತು ಶಿಫ್ಟ ಕಾರು ದ್ವಿಚಕ್ರ ವಾಹನಗಳ ಹಿಂದೆ ಮತ್ತು ಮುಂದೆ ಇತ್ತು. ಕಾಂಪೌಂಡ್ ನ ಮುಖ್ಯ ಗೇಟ್ ಕಾರು ಪಾಸಾಗುವಷ್ಟು ಅಗಲ ಇತ್ತು ಆದರೆ ಆ ಗೇಟ್ ನ ಉದ್ದ-ಅಗಲ ಗೊತ್ತಿಲ್ಲ. ಕಾಂಪೌಂಡ್ ಒಳಗೆ ಸಿ.ಸಿ ಕ್ಯಾಮರಾ ಇತ್ತು. ಆ ಸಿ.ಸಿ ಕ್ಯಾಮರಾದಲ್ಲಿ ಪಂಚನಾಮೆ ರೆಕಾರ್ಡ್ ಅಗುತ್ತಿತ್ತು ಎಂದು ನನಗೆ ಪೊಲೀಸರು ಹೇಳಿಲ್ಲ. ನಾನು ಗುರುತಿದ ಪೋಟೋಗಳಲ್ಲಿ ನಾನು ಹೇಳಿದ ಕಾಂಪೌಂಡ್ ದೃಶ್ಯಗಳು ಇಲ್ಲ ಎಂದರೆ ಸರಿ. ಮಹಜರ್ ಮಾಡುವಾಗ ಕಾರಿನ ನಂಬರ್ ಅನ್ನು ಸಿ.ಪಿ.ಐ ರವರು ಹೇಳಿ ಬರೆಸಿದರು. ಅದನ್ನು ಲ್ಯಾಪ್ ಟಾಪ್ ನಲ್ಲಿ ಬರೆದರು. ಮತ್ತು ಅದನ್ನು ಮಹಜರ್ ಮಾಡುವ ಹತ್ತಿರದಲ್ಲಿ ಟೈಪ್ ಮಾಡಿದರು. ಮಹಜರ್ ಅನ್ನು ನೇರವಾಗಿ ಲ್ಯಾಪ್ ಟಾಪ್ ನಲ್ಲಿ ಟೈಪು ಮಾಡಿದರು. ಲ್ಯಾಪ್‌ಟಾಪ್ ಅನ್ನು ಒಳಗಡೆ ಟೇಬಲ್ ಮೇಲೆ ಇಟ್ಟು ಟೈಪ್ ಮಾಡಿದರು. ಸಿ.ಪಿ.ಐ ರವರು ಮಹಜರ್ ಮಾಡಿದ ಸ್ಥಳದಲ್ಲಿ ನೋಡಿ ಒಳಗೆ ಬಂದು ಟೈಪ್ ಮಾಡಿಸಿದರು. ಸಿ.ಪಿ.ಐ ರವರು ಮಹಜರ್ ಮಾಡುವಾಗ ವಿಡಿಯೋ

ಮಾಡಿದರು ಆದರೆ ಯಾವುದೇ ನೋಡ್ಸ ಮಾಡಿ ಟೈಪ್ ಮಾಡಿಸಿಲ್ಲ. ಸಿ.ಪಿ.ಐ ರವರು ವಿಡಿಯೋ ಮಾಡಿದರು ಮತ್ತು ಮಹಜಹರ್ ಮಾಡುವಾಗ ನೋಡಿದ್ದನ್ನು ಬಂದು ಟೈಪ್ ಮಾಡಿಸಿದ್ದಾರೆ. ಸಿ.ಪಿ.ಐ ರವರು ನೋಡಿದ್ದನ್ನು ಒಳಗಡೆ ಬಂದು ಡಿಕ್ಟೇಷನ್ ಕೊಟ್ಟು ಟೈಪ್ ಮಾಡಿಸಿದರು. ಆ ಕಾರುಗಳು ಯಾವಾಗ ಬಂದು ಸಿ.ಪಿ.ಐ ಕಾಂಪೌಂಡ್ ನಲ್ಲಿ ತಂದು ನಿಲ್ಲಿಸಿದರು ಎಂದು ನನಗೆ ಗೊತ್ತಿಲ್ಲ. ಆ ಕಾರು ಲಾಕ್ ಆಗಿತ್ತು ಅದನ್ನು ಒಪನ್ ಮಾಡಿದರು. ಆ ಲಾಕ್ ಅನ್ನು ಸಿ.ಪಿ.ಐ ರವರು ಒಪನ್ ಮಾಡಿದರು. ಮೈಕಾನಿಕ್ ಅನ್ನು ಕರೆದುಕೊಂಡು ಬಂದು ಕಾರಿನ ಬಾಗಿಲನ್ನು ಒಪನ್ ಮಾಡಿಸಿದರು. ಕಾರನ್ನು ಯಾವ ರೀತಿ ತೆಗೆದುಕೊಂಡು ಬಂದರು ಎಂದು ನನಗೆ ಗೊತ್ತಿಲ್ಲ. ಮೈಕಾನಿಕ್ ಬಂದು ಕಾರನ್ನು ಒಪನ್ ಮಾಡುವಾಗ ವಿಡಿಯೋ ಮಾಡಿದ್ದಾರೆ. ವಿಡಿಯೋ ದಲ್ಲಿ ಕಾರು ಒಪನ್ ಮಾಡಿದ ಮೈಕಾನಿಕ್ ಇದ್ದಾರೋ ಇಲ್ಲವೂ ಜ್ಞಾಪಕ ಇಲ್ಲ. ನಿಪಿ-41 ರಲ್ಲಿ ಕಾರು ಮೈಕಾನಿಕ್ ಇದ್ದಾರೋ ಇಲ್ಲವೂ ಗುರುತಿ ಹಿಡಿಯಲು ಆಗುವುದಿಲ್ಲ. ನಿಪಿ-41 ರಲ್ಲಿ ಇರುವವರನ್ನು ಗುರುತು ಹಿಡಿಯುವುದು ಕಷ್ಟ ಎಂದರೆ ಸರಿ. ಎರಡು ಕಾರಗಳಲ್ಲಿ ಯಾವ ಕಾರು ಮೊದಲು ನಿಂತಿತ್ತು ಯಾವ ಕಾರು ನಂತರ ನಿಂತಿತ್ತು ಎಂದು ಈಗ ಜ್ಞಾಪಕ ಇಲ್ಲ. ಶಿಫ್ಟ ಮತ್ತು ಕಾಲೀಸ್ ಕಾರನಲ್ಲಿ ಬರವಣಿಗೆ ಇದ್ದ ಬಗ್ಗೆ ಜ್ಞಾಪಕ ಇಲ್ಲ. ಶಿಫ್ಟ ಕಾರಿನ ಡ್ಯಾಷ್‌ಬೋರ್ಡ ನಲ್ಲಿ ಮೊಬೈಲ್ ಗಳು ಇದ್ದವು. ಆ ಮೊಬೈಲ್ ಗಳ ಸಿಮ್ ಕಾರ್ಡ್ ಅನ್ನು ತೆಗೆದುದ ಲ್ಯಾಪ್ ಟಾಪ್ ಗೆ ಹಾಕಿ ಯಾರು ಯಾರು ಮಾತನಾಡಿದ್ದಾರೆ ಎಂದು ನನ್ನ ಮುಂದೆ ನೋಡಿಲ್ಲ. ಸಿಮ್ ನಂಬರ್ ನನಗೆ ಗೊತ್ತಿಲ್ಲ. ಮೊಬೈಲ್ ಅನ್ನು ಕಾರಿನಿಂದ ಇಚೆ ತಂದು ನನಗೆ ಸಿ.ಪಿ.ಐ ರವರು ತೋರಿಸಿದರು. ನಾನು ಶಿಫ್ಟ ಕಾರಿನ 2-3 ಅಡಿ ದೂರದಲ್ಲಿ ಇದ್ದೆ. ಕಾರಿನ ಮುಭಾಗದಿಂದ 2-3 ಅಡಿ ದೂರ ಇದ್ದೆ. ಕಾರು ಸಿ.ಪಿ.ಐ ಕಛೇರಿಯ ಗೊಡೆಗಿಂತ ಸುಮಾರು 2 ಮೀಟರ್ ದೂರದಲ್ಲಿ ಇತ್ತು. ನಾನು ಪೊಲೀಸರು ವಿಡಿಯೋ ಮಾಡುವವರು ಅಲ್ಲೆ ನಿಂತಿದ್ದೇವು. ಕಾರಿನ ಎದುರುಗಡೆಯ ಗ್ಲಾಸ್ ಮೂಲಕ ಏನು ಕಾಣುತ್ತಿರಲಿಲ್ಲ ಎಂದರೆ ನನಗೆ ಜ್ಞಾಪಕವಿಲ್ಲ. ನಾನು ಕಾರಿನ ಒಳಗಡೆ ಹೋಗಿಲ್ಲ ಆದ್ದರಿಂದ ಕಾರಿನ ಒಳಗಡೆ

ಕೂತವರಿಗೆ ಹೊರಗಡೆಯವರು ಕಾಣುತ್ತಾರೋ ಇಲ್ಲವೊ ಗೊತ್ತಿಲ್ಲ. ಕಾರಿನ ಒಳಗಡೆ ಸೀಟ್ ಗಳಲ್ಲಿ ಏನು ಏನು ಇತ್ತು ಎಂದು ನಾನು ನೋಡಿಲ್ಲ. ಎರಡು ಕಾರಿನ ಒಳಗಡೆ ಏನು ಏನು ಇತ್ತು ಎಂದು ನಾನು ನೋಡಿಲ್ಲ. ಪೊಲೀಸರು ಕಾರಿನ ಒಳಗಡೆ ಯಿಂದ ಮೊಬೈಲ್ ಮತ್ತು ಬಟ್ಟೆ ಬಿಟ್ಟು ಏನು ಬಿಟ್ಟು ಬಂದರು ಏನು ತೆಗೆದುಕೊಂಡು ಬಂದರು ಎಂದು ಗೊತ್ತಿಲ್ಲ. ಮೊಬೈಲ್ ಮತ್ತು ಬಟ್ಟೆ ಬಿಟ್ಟು ಕಾರಿನ ಒಳಗಡೆ ಬೇರೆ ಏನು ಏನು ಇತ್ತು ಎಂದು ಪೊಲೀಸರು ನನಗೆ ತೋರಿಸಿಲ್ಲ. ಆ ರೀತಿ ಏನು ಏನು ಬಿಟ್ಟು ಬಂದಿದ್ದಾರೆ ಎಂದು ಮಹಜರ್ ನಲ್ಲಿ ಬರೆದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಬಟ್ಟೆಗಳನ್ನು ಕಾರಿನ ಒಳಗಿನಿಂದ ಪ್ಲಾಸ್ಟಿಕ್ ಕವರ್ ನಲ್ಲಿ ಇದ್ದುದನ್ನು ತಂದರು ಯಾವ ತರಹದ ಪ್ಲಾಸ್ಟಿಕ್ ಎಂದು ಗೊತ್ತಿಲ್ಲ. ಪ್ಲಾಸ್ಟಿಕ್ ಕವರ್ ಕಾರಿನಿಂದ ಹೊರಗಡೆ ತಂದಾಗ ಸುತ್ತಿತ್ತೊ ಅಥವಾ ಬಾಯಿ ಕಟ್ಟಿತ್ತೋ ಎಂದು ನನಗೆ ಗೊತ್ತಿಲ್ಲ. ಹೊರಗಡೆ ತಂದ ಕವರ್ ನಿಂದ ಬಟ್ಟೆಯನ್ನು ಹೊರಗೆ ತೆಗೆಯದೆ ಕವರ್ ಅನ್ನೆ ಸೀಜ್ ಮಾಡಿದರು ಎಂದರೆ ಸಾಕ್ಷಿ ಕವರ್ ನಲ್ಲಿ ಇದ್ದ ಬಟ್ಟೆಯನ್ನು ತೋರಿಸಿ ಬಳಿಕ ಸೀಜ್ ಮಾಡಿದರು. ಕವರ್ ಅನ್ನು ಕೂಡ ಸೀಜ್ ಮಾಡಿದ್ದಾರೆ. ನನ್ನ ಪ್ರಕಾರ ಒಂದೇ ಕವರ್ ಸೀಜ್ ಮಾಡಿದ್ದಾರೆ. ಆ ಬಟ್ಟೆಗಳ ಸೈಜ್ ಮತ್ತು ಅದು ರೆಡಿಮೇಡ್ ಅಥವಾ ಹೊಲಿಸಿದ್ದೊ ಎಂದು ಜ್ಞಾಪಕ ಇಲ್ಲ. ಅದನ್ನು ಮಹಜರ್ ನಲ್ಲಿ ಬರೆದಿದ್ದಾರೆ. ನನಗೆ ಮಹಜರ್ ನ ವಿಚಾರ ಏನು ಗೊತ್ತಿಲ್ಲ, ಪೊಲೀಸರು ಮಹಜರ್ ಅನ್ನು ಬರೆದು ಬರೆದಿದ್ದೇವೆ ಎಂದು ಹೇಳಿದ್ದರಿಂದ ನಾನು ಈ ರೀತಿ ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ನನ್ನ ಮುಂದೆ ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತು ಪಡಿಸಿಲ್ಲ ಎಂದರೆ ಸರಿಯಲ್ಲ. 01:30 ಯಿಂದ 2:45 ವರಗೆ ನಾನು ಠಾಣೆಯಲ್ಲಿ ಇದ್ದೆ. ಪೊಲೀಸರು ಕೂಡ ಠಾಣೆಯಲ್ಲಿ ಇದ್ದರು. ನಾನು ಮಹಜರ್ ನಲ್ಲಿ ಭಾಗಿ ಆದ ಬಗ್ಗೆ ಅಲ್ಲಿಂದ ಬಂದ ಬಗ್ಗೆ ನನ್ನ ವೈಕ್ತಿಕ ಡೈರಿಯಲ್ಲಿ ನಮೂದು ಮಾಡಿಲ್ಲ. ಕೊರಟಗೆರೆಯಿಂದ ಜಟ್ಟಿ ಅಗ್ರಹಾರ ಸುಮಾರು 6 ರಿಂದ 7 ಕಿ.ಮೀ ದೂರ ಇದೆ. ಜಟ್ಟಿ ಅಗ್ರಹಾರ ದಿಂದ ನಾವು ಪಶ್ಚಿಮ ದಿಕ್ಕಿನಿಂದ ಹೋದೇವು. ಜಟ್ಟಿ ಅಗ್ರಹಾರದ ಅಕ್ಕ ಪಕ್ಕ ಮನೆಗಳು ಹೊಲಗಳು ಇದ್ದಾರೆ

ಎಂದರೆ ಹೊಲಗಳು ಇವೆ ಮನೆಗಳು ಇಲ್ಲ. ಜಟ್ಟಿ ಅಗ್ರಹಾರದಿಂದ 160 ಅಡಿ ದೂರು ಹೋಗಿದ್ದೇವೆ. ಆ ರಸ್ತೆ ಉತ್ತರ-ದಕ್ಷಿಣ ವಾಗಿದೆ ಎಂದರೆ ಸರಿಯಲ್ಲ ಪೂರ್ವ-ಪಶ್ಚಿಮ ವಾಗಿದೆ. ಆ ರಸ್ತೆಯ ಪಕ್ಕ ಸರ್ಕಾದಿಂದ ನೀರು ಸರಬರಾಜು ಮಾಡುವ ಬೋರ್ ವೆಲ್ ಮತ್ತು ಅದಕ್ಕೆ ಸಂಬಂದಪಟ್ಟ ಪಂಪ್ ಹೌಸ್ ಇತ್ತು ಎಂದರೆ ನಾನು ಗಮನಿಸಿಲ್ಲ. ಆ ರಸ್ತೆಯ ಎರಡು ಬದುಗಳಲ್ಲಿ ವ್ಯವಸಾಯದ ಜಮೀನುಗಳು ಇವೆ ಎಂದರೆ ಸರಿ. ಅವು ಬೆಳೆ ಬೆಳೆಯುವ ಜಮೀನುಗಳು ಎಂದರೆ ಸರಿ. ನಾನು ಹೋದ ಸಮಯದಕ್ಕೆ ಅದು ಉಳುಮೆ ಕಾಲುವೂ ಅಥವಾ ಕಟಾವು, ಮಾಡುವ ಕಾಲವೊ ಎಂದು ಗೊತ್ತಿಲ್ಲ. ಬೆಳೆ ಇತ್ತೊ ಇಲ್ಲವೊ ಗೊತ್ತಿಲ್ಲ. ನಾನು ನೋಡಿದಾಗ ಆ ಜಮೀನುಗಳು ಅಚ್ಚು ಕಟ್ಟಾಗಿದ್ದವು ಎಂದರೆ ಬೀಳು ಇತ್ತು ಎಂದು ನುಡಿಯುತ್ತಾರೆ. ನಾನು ನೋಡಿದಾಗ ಬೆಳೆ ಕಟಾವು ಆಗತ್ತೊ ಎಂಬ ಬಗ್ಗೆ ಗೊತ್ತಿಲ್ಲ ಆದರೆ ಬೀಳು ಇತ್ತು. ನಾನು ಆ ಜಮೀನುಗಳಲ್ಲಿ ಮುಳ್ಳು ತಂತಿ ಅಥವಾ ಇತರ ಬೇಲಿ ಇದ್ದ ಬಗ್ಗೆ ಗಮನಿಸಿಲ್ಲ. ನಾನು ಹೋದಾಗ ಅಲ್ಲಿ ದನ ಕರು ಮತ್ತು ಕುರಿ ಮತ್ತು ಅವುಗಳನ್ನು ಮೇಯಿಸುವವರನ್ನು ನೋಡಿಲ್ಲ. ನಾನು ಹೋದಾಗ ಅಲ್ಲಿ ಜನಗಳು ಇರಲಿಲ್ಲ ಮತ್ತೆ ನೋಡಲು ನಾಲ್ಲು ಐದು ಜನ ಬಂದರು. ಆ ಜಾಗದ ಅಕ್ಕ ಪಕ್ಕ ಮನೆಗಳು ನನ್ನ ಪ್ರಕಾರ ಇರಲಿಲ್ಲ. ಅಲ್ಲಿ ಪಕ್ಕದಲ್ಲಿ ಪಶ್ಚಿಮಕ್ಕೆ 150 ಅಡಿ ದೂರದಲ್ಲಿ ಒಂದು ಮನೆ ಇತ್ತು ಎಂದರೆ ನಾನು ಗಮನಿಸಿಲ್ಲ. ಆ ಜಾಗದ ಪಕ್ಕದಲ್ಲಿ ಅಡಿಕೆ ತೋಟ, ತೆಂಗಿನ ತೋಟ ಇತ್ತು ಎಂದರೆ ನಾನು ಗಮನಿಸಿಲ್ಲ. ಅದು ದನ,ಕುರಿ ಮೇಯಿಸುವ ಜಾಗ ಎಂದರೆ ಸರಿಯಲ್ಲ. ಆ ರಸ್ತೆಯ ಬದಿಯಲ್ಲಿ ತಿಮ್ಮಪ್ಪ ಮತ್ತು ಸೂರಪ್ಪ ಎಂಬುವವರ ಜಮೀನು ಇತ್ತು ಆದರೆ ಉತ್ತರ-ದಕ್ಷಿಣಕ್ಕೆ ಯಾರ ಯಾರ ಜಮೀನು ಇತ್ತು ಎಂದು ಗೊತ್ತಿಲ್ಲ. ಅಲ್ಲಿಗೆ ಪೊಲೀಸರು ಅಕ್ಕ ಪಕ್ಕದವರನ್ನು ಕರೆಸಿಕೊಂಡಿಲ್ಲ. ಅವರು ಅಕ್ಕಪಕ್ಕದವರು ಬಂದಿದ್ದರೋ ಇಲ್ಲವೋ ನಾನು ನೋಡಿಲ್ಲ. ಕೃತ್ಯ ನಡೆದ ಎಷ್ಟು ದಿವಸದ ನಂತರ ನಾನು ಅಲ್ಲಿಗೆ ಹೋಗಿದ್ದೆ ಎಂದು ಪೊಲೀಸರು ನನಗೆ ಹೇಳಿಲ್ಲ. ಆ ಸ್ಥಳದ ಅಕ್ಕ ಪಕ್ಕ ಜನ ಓಡಾಡಿದ, ಪ್ರಾಣಿಗಳು ಓಡಾಡಿದ ನಿಶಾನೆ ಇತ್ತು ಎಂದರೆ

ಸರಿಯಲ್ಲ. ಆ ರಸ್ತೆಯಲ್ಲಿ ವಾಹನಗಳು ಸಾಮಾನ್ಯವಾಗಿ ಓಡಾಡುತ್ತಿದ್ದವು ಎಂದರೆ ಸರಿ. ಆರೋಪಿಗಳು ಪೊಲೀಸರನ್ನು ಮತ್ತು ನಮನ್ನು ಆ ಸ್ಥಳಕ್ಕೆ ಕರೆದುಕೊಂಡು ಹೋಗಲೇ ಇಲ್ಲ ಎಂದರೆ ಸರಿಯಲ್ಲ. ಮತ್ತು ಆರೋಪಿಗಳು ಅಲ್ಲಿ ಯಾವುದೇ ಆಯುಧಗಳನ್ನು ಪೊಲೀಸರಿಗೆ ತೋರಿಸಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾವು 7-8 ಜನ ಅಲ್ಲಿಗೆ ಹೋಗಿದ್ದೇವೆ. ನಾವು ಅಲ್ಲಿಗೆ ಹೋಗಲೇ ಇಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಗಳ ಜೊತೆ ಯಾವುದೇ ಸ್ಥಳಕ್ಕೆ ಹೋಗಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಗುರುತಿಸಿದ ಮೊಬೈಲ್ ಗಳು ಯಾರಿಗೆ ಸೇರಿದ ಮೊಬೈಲ್ ಗಳು ಎಂದು ನನಗೆ ಗೊತ್ತಿಲ್ಲ. ನನ್ನ ಮುಂದೆ ಪೊಲೀಸರು ಯಾವುದೇ ಮೊಬೈಲ್ ಅನ್ನು ಸೀಜ್ ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಮಧುಗಿರಿ.**